# ನಟ ನೀರಿನ ಪ್ರತಿರೂಪದಂತೆ



**ಶಿಶಿರ್ ಕುಮಾರ್**
ಕಲರ್ಸ್ ಕನ್ನಡದ
'ನನ್ನರಸಿ ರಾಧೆ' ಅಭಿಜಿತ್

◆ **ರಂಗಭೂಮಿಯ ಮೋಹ ಹುಟ್ಟಿದ್ದು ಹೇಗೆ? ಬಣ್ಣವನ್ನು ನೀವು ಒಗ್ಗಿಸಿಕೊಂಡಿದ್ದು ಹೇಗೆ?**

ರಂಗಭೂಮಿಯ ನಂಟು ಕುಟುಂಬದ ಜೊತೆ ಬೆಸೆದುಕೊಂಡಿದೆ. ಉಡುಪಿಯ ಶಿರ್ವ ನಮ್ಮ ಮೂಲ. ತಂದೆ ಶಂಕರ್ ಭಟ್ ಕಾಲೇಜು ಕನ್ನಡ ಅಧ್ಯಾಪಕರು. ಅವರು ಒಂದು ರಂಗ ತಂಡವನ್ನು ಕಟ್ಟಿದ್ದರು. ಅದನ್ನು ನೋಡುತ್ತಾ ಬೆಳೆದ ನಾನೂ ಬಾಲ್ಯದಲ್ಲಿಯೇ ಬಣ್ಣವನ್ನು ಹಚ್ಚಿಕೊಂಡೆ. ಊರಲ್ಲಿ ಯಕ್ಷಗಾನ ಮತ್ತು ನಾಟಕಗಳನ್ನು ನೋಡುತ್ತಲೇ ನನ್ನೊಳಗೆ ಒಬ್ಬ ನಟ ರೂಪಿತನಾದ. ಪಿಯುಸಿಯಲ್ಲಿ ಕನ್ನಡ ಉಪನ್ಯಾಸಕ ಶ್ರೀಧರಮೂರ್ತಿ ಅವರ ಮಾರ್ಗದರ್ಶನದಲ್ಲಿ ಏಕಪಾತ್ರ ಅಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಮಟ್ಟದಲ್ಲಿ ಪ್ರಶಸ್ತಿಯನ್ನೂ ಪಡೆದೆ. ಎಂಜಿನಿಯರಿಂಗ್ ನಂತರ ಸಾಫ್ಟ್‌ವೇರ್ ಕಂಪನಿಗೆ ಕೆಲಸಕ್ಕೆ ಸೇರಿದೆ. ಆಗ ರಂಗಭೂಮಿಯ ಸಂಪರ್ಕ ಸ್ವಲ್ಪ ಕಡಿಮೆ ಆಯಿತು. ಎರಡ್ಮೂರು ವರ್ಷದ ತರುವಾಯ ರಂಗಕರ್ಮಿ ನಾಗರಾಜ ಸೋಮಯಾಜಿ ಪರಿಚಯ ಆಯಿತು. ಅವರ 'ಸರ್ವಸ್ವ' ಎನ್ನುವ ರಂಗ ತಂಡದ ಮೂಲಕ 'ಮೌನ' ಎಂಬ ನಾಟಕ ಆಡಿದೆ.

'ಬೆಂಗಳೂರು ವಿಷನ್ ಥಿಯೇಟರ್' ತಂಡದಲ್ಲಿಯೂ ಸಕ್ರಿಯನಾದೆ. 'ದಿ ಬೆಸ್ಟ್‌ಆಕ್ಟರ್' ಕಿರುಚಿತ್ರದಲ್ಲಿ ಪಾತ್ರವನ್ನು ನಿರ್ವಹಿಸುವ ಮೂಲಕ ಕ್ಯಾಮೆರಾಗೆ ಎದುರಾದೆ. 'ಗಂಗಾ' ಧಾರಾವಾಹಿಯಲ್ಲಿ ಒಂದು ಪಾತ್ರ ಸಿಕ್ಕಿತು. ಅದು ನನಗೆ ಕಿರುತೆರೆಯನ್ನು ಪರಿಚಯಿಸಿತು. ಅದಕ್ಕೂ ಮುಂಚೆ 'ಶುದ್ಧಿ' ಸಿನಿಮಾದಲ್ಲಿ ಪುಟ್ಟ ಪಾತ್ರಕ್ಕೆ ಬಣ್ಣ ಹಚ್ಚಿದ್ದೆ. 'ಅಕ್ಕ', 'ಶಾಂತಂ ಪಾಂಪಂ'ನಲ್ಲಿಯೂ ಕಾಣಿಸಿಕೊಂಡೆ. 'ಸುಬ್ಬಲಕ್ಷ್ಮಿ ಸಂಸಾರ'ದಲ್ಲಿ ಸಿಕ್ಕ ಅವಕಾಶ ನಟನೆಯ ಭಾಗ್ಯದ ಬಾಗಿಲನ್ನು ತೆರೆಯಿತು. ಸಂಚಾರಿ ವಿಜಯ ಅವರ ಜೊತೆ 'ಪುಕ್ಕಸಟ್ಟೆ ಲೈಫ್' ಕಿರುಚಿತ್ರ ತುಂಬ ಕಲಿಸಿತು. 'ನಾಗಿಣಿ 2'ನಲ್ಲಿ ಮಾಡಿದೆ. 'ನನ್ನರಸಿ ರಾಧೆ' ಇನ್ನೂ ಹೆಚ್ಚಿನ ಮನ್ನಣೆಯನ್ನು ತಂದುಕೊಟ್ಟಿದೆ. ಇದರಲ್ಲಿ ಅಭಿಜಿತ್ ಆಗಿ ನೆಗೆಟಿವ್‌ಗುಣಗಳ ರೂಪ ಪಡೆದಿದ್ದೇನೆ. ಈ ರೀತಿಯ ಪಾತ್ರ ಹೊಸತು. ಹಾಗಾಗಿ ಆರಂಭದಿಂದಲೇ ಸವಾಲಾಗಿ ಎದುರಾಯಿತು.

◆ **ಟೆಕ್ಕಿ ಆಗಿದ್ದ ನಿಮಗೆ ಬಣ್ಣದ ಬದುಕು ಕಷ್ಟ ಆಗಬಹುದು ಎನ್ನುವ ಮಾತುಗಳು ಎದುರಾಗಲಿಲ್ಲವೇ?**

ಟೆಕ್ಕಿ ಹೌದು. ಅಲ್ಲಿ ಉದ್ಯೋಗ ಮಾಡುತ್ತೇನೆ. ಆದರೆ ನನ್ನ ಆಯ್ಕೆ ಬಣ್ಣ. ಹಾಗಾಗಿ ಅಭಿನಯವನ್ನೇ ಮುಂದುವರಿಸುತ್ತೇನೆ. ಎರಡೂ ಕಡೆ ಪೋಷಣೆ ಮಾಡುವುದು ಕಷ್ಟ ಆಗಬಹುದು ಎಂದು ಸಲಹೆಯನ್ನು ನೀಡಿದರು. ಆದರೆ ಮನೆಯಲ್ಲಿಯೂ ಪೂರಕವಾದ ವಾತಾವರಣ ಇತ್ತು ನನ್ನ ತಂದೆ, ಅಮ್ಮ (ಸಂಧ್ಯಾ ಭಟ್) ಪತ್ನಿ (ಸೌಮ್ಯಾ) ಬೆಂಬಲಕ್ಕೆ ನಿಂತಿದ್ದಾರೆ. ಇದರ ಜೊತೆ ರಂಗ ಗೆಳೆಯರ ಸೆಳೆತ ಇಲ್ಲೇ ಇರುವ ವಾತಾವರಣವನ್ನು ಕೊಟ್ಟಿದೆ. ಇಲ್ಲಿ ನನಗೆ ಕಷ್ಟ ಎಂದು ಅನ್ನಿಸಲೇ ಇಲ್ಲ. ಬಣ್ಣ ಎನ್ನುವುದನ್ನು ಲೀಲಾಜಾಲವಾಗಿ ಮೈಗೂಡಿಸಿಕೊಂಡಿದ್ದೇನೆ. ಓದು ಮತ್ತು ಉದ್ಯೋಗದ ಕಾರಣಕ್ಕೆ ಒಂದಿಷ್ಟು ವಿಳಂಬವಾಯಿತು ಅಷ್ಟೇ. ಇಷ್ಟಪಟ್ಟು ಮಾಡುತ್ತಿದ್ದೇನೆ. ತುಂಬ ಕಲಿಯುವುದಿದೆ. ಈಗ ಏನಾದರೂ ಕಲಿತಿದ್ದೇನೆ ಅಂದರೆ ಅದು ರಂಗಭೂಮಿಯಿಂದಲೇ ಅದು ನನಗೆ ಜೀವಾಳ. ಪ್ರತಿ ಪಾತ್ರದಲ್ಲಿಯೂ ಹೊಸದನ್ನು ಕಲಿಯುತ್ತೇನೆ.

◆ **'ನಿರ್ದೇಶನವನ್ನು ಏಕೆ ಮಾಡಬಾರದು' ಎಂದು ನಿಮ್ಮ ಗೆಳೆಯರು ಹೇಳಿದರೆ...**

ಯಾವುದೇ ಕಲಾ ಪ್ರಕಾರ ಆದರೂ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎನ್ನುವುದು ನನ್ನ ಬಯಕೆ. ನನ್ನ ಪ್ರಾಮುಖ್ಯತೆ ಅಭಿನಯ. ನಿರ್ದೇಶನದ ಹಿಂದೆ ಎಷ್ಟೋ ವರ್ಷಗಳ ಅನುಭವ, ಪರಿಶ್ರಮ ಇರುತ್ತದೆ. ನಾನು ಇನ್ನೂ ಆ ಮಟ್ಟಕ್ಕೆ ಬಂದಿಲ್ಲ.

◆ **ನಟನಾಗಿ– ಸಹೃದಯನಾಗಿ ಇಂತಹ ಒಂದು ಪಾತ್ರಕ್ಕೆ ಜೀವ ತುಂಬ ಬೇಕು ಎಂದು ಕಾಡಿದ್ದು ಇದೆಯಾ?**

ಇದೇ ರೀತಿಯ ಪಾತ್ರ ಮಾಡಬೇಕು ಎನ್ನುವ ಸಿದ್ಧತೆ ಇಲ್ಲ. ಐದು ವರ್ಷಗಳಿಂದ ಕ್ಯಾಮೆರಾ ಮುಂದೆ ನಿಂತಿದ್ದೇನೆ. ಅದಕ್ಕಿಂತ ಮುಂಚೆ ರಂಗಭೂಮಿಯಲ್ಲಿ ಇದ್ದೆ. ಚಿತ್ರ ಮಾಧ್ಯಮ ನೋಡಿದಾಗಿನಿಂದ ನನಗೆ ಪ್ರಭಾವಿಸಿದ ಕಲಾವಿದರು ಎಲ್ಲೋ ಕಾಡುತ್ತಾರೆ. ಕನ್ನಡದಲ್ಲಿ ಉಪೇಂದ್ರ ಒಬ್ಬ ಕಲಾವಿದ ಆಗಿ ಹೆಚ್ಚು ಪ್ರೇರಣೆ ನೀಡಿದ್ದಾರೆ. ಬಾಲಿವುಡ್‌ನಲ್ಲಿ ಪಂಕಜ್ ತ್ರಿಪಾಠಿ ತೀರ ಸಹಜವಾದ ನಟನೆಯನ್ನು ಮಾಡುತ್ತಾರೆ. ಅವರ ನಟನೆ ಇಷ್ಟ ಆಗುತ್ತದೆ. ಹಾಲಿವುಡ್‌ನಲ್ಲಿ ಡಂಜಿಲ್ ವಾಷಿಂಗ್ಟನ್ ಹಾಗೂ ಆಸ್ಕರ್‌ಪ್ರಶಸ್ತಿ ಪುರಸ್ಕೃತ ಅಂಥೋನಿ ಹಾಕಿನ್ಸ್ ಇಷ್ಟ ಆಗುತ್ತಾರೆ. ಇಂತಹ ಕಲಾವಿದರ ಪಾತ್ರಗಳು ನನಗೂ ಸಿಗಬೇಕು ಎನ್ನುವ ಆಸೆ ಇದೆ. ಒಂದು ಪಾತ್ರಕ್ಕೆ ಮಾದರಿ ಅಂತ ಆಗಬಾರದು. ನಟ ನೀರಿನಂತೆ ಇರಬೇಕು. ಅವನನ್ನು ಯಾವ ಆಕಾರದ ಪಾತ್ರಗೆ ಹಾಕುತ್ತಾರೋ ಆ ಸ್ವರೂಪವನ್ನು ಪಡೆಯಬೇಕು.

◆ **ಖುಷಿ ಕೊಡುವ ಮಾಧ್ಯಮ ಯಾವುದು?**

ಮೂರೂ ಪ್ರಕಾರದಲ್ಲಿ ಕೆಲಸ ಮಾಡುತ್ತಿದ್ದೇನೆ. ಅಭಿನಯದಲ್ಲಿ ಒಂದಿಷ್ಟು ಬದಲಾವಣೆ ಇರುತ್ತವೆ. ಸೀರಿಯಲ್‌ನಲ್ಲಿ ಭಾವನೆಯನ್ನು ಮುಖದಲ್ಲಿಯೇ ತೋರಿಸಬೇಕಾಗುತ್ತದೆ. ರಂಗಭೂಮಿಯಲ್ಲಾದರೆ ಬೇರೆಯ ರೀತಿಯಲ್ಲಿ ತೊಡಗುವಂತೆ ಬಯಸುತ್ತದೆ. ಅದರಂತೆಯೇ ಸಿನಿಮಾ ಕೂಡ. ನಾನು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತ ಆಗುವುದಿಲ್ಲ. ಕತೆಗೆ ಪ್ರಾಮುಖ್ಯತೆ ಇರಬೇಕು. ಯಾವುದೋ ಒಂದು ಪಾತ್ರವನ್ನು ವೈಭವೀಕರಿಸುವ ಕಥೆ ನನಗೆ ಅಷ್ಟು ಇಷ್ಟ ಆಗಲ್ಲ. ಕಥೆಯೇ ನಾಯಕ ಆಗಬೇಕು. ಅದರಲ್ಲಿ ಕಥೆಯನ್ನು ಮುಂದುವರಿಸುವ ಪಾತ್ರ ನಾನಾಗ ಬಯಸುತ್ತೇನೆ.

■ **ರಾಘವೇಂದ್ರ ಕೆ.**